101	PHARMACIST AYUSH	4		4
102	PHYSIOTHERAPIST	80	38	42
103	PLANNING OFFICER	1		1
104	PLATE MAKER	1		1
105	PROCESS OPERATOR	1		1
106	PROGRAMME ASSISTANT HFW	1		1
107	PROJECTIONIST	19	13	6
108	PSYCHIATRIC SOCIAL WORKER	16	12	4
109	REGISTRAR CLASS-1 (CIVIL JUDGE JUNIOR GRADE)	1		1
110	RESEARCH ASSISTANT	1		1
111	RESEARCH OFFICER HFW	2		2
112	SCIENTIFIC OFFICER	5	1	4
113	SECOND DIVISION ASSISTANT	2558	1293	1265
114	SENIOR ASSISTANT ARCHITECT	1		1
115	SENIOR COMPOSITOR	1		1
116	SENIOR ENTOMOLOGIST	3		3
117	SENIOR FOOD ANALYST	4	4	0
118	SENIOR FOOD SAFETY OFFICER	34	12	22
119	SENIOR HEALTH ASSISTANT FEMALE	1557	755	802
120	SENIOR HEALTH ASSISTANT MALE	1464	822	642
121	SENIOR HEALTH EDUCATION OFFICER	1		1
122	SENIOR HEALTH SUPERVISOR	66	2	64
123	SENIOR LIBRARIAN	2		2
124	SENIOR MEDICAL LABORATORY TECHNOLOGIST	558	275	283
125	SENIOR MEDICAL RADIOLOGICAL TECHNOLOGIST	32	12	20
126	SENIOR OFFSET PRINTER	1		1
127	SENIOR OPHTHALMIC OFFICER	15	7	8
128	SENIOR PHARMACIST	522	216	306
129	SENIOR PROGRAMMER	1		1
130	SENIOR PROOF EXAMINOR	1		1
131	SENIOR STAFF NURSE	513	63	450
132	SENIOR STATISTICAL OFFICER	1		1
133	SERVICE ENGINEER	34	2	32
134	SKILLED ASSISTANT	107	12	95
135	SKILLED TRADESMAN	111	27	84

136	SOCIAL WORKER	22	3	19
137	SPECIALIST	2674	1555	1119
138	STAFF NURSE	8206	4833	3373
139	STATISTICAL OFFICER	8	2	6
140	STENOGRAPHER	76	19	57
141	SUB EDITOR	1		1
142	SUPER SPECIALIST	95	1	94
143	TECHNICAL ASSISTANT	4		4
144	TECHNICAL OFFICER	2	1	1
145	TRANSPORT MANAGER	3	2	1
146	TRANSPORT OFFICER	2	1	1
147	TYPIST	135	60	75
	GRAND TOTAL	**68379**	**38333**	**30046**

ಅನುಬಂಧ-3

ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

- ಇಲಾಖೆಯಲ್ಲಿ ಖಾಲಿ ಇರುವ 365+111=476 (ಈ ಪೈಕಿ 111-ಹೈ-ಕರ್ನಾಟಕ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕೋರಲಾಗಿತ್ತು, ಆದರೆ 457 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಅಂತಿಮ ಪಟ್ಟಿ ಪ್ರಕಟಣೆಗೊಂಡಿದ್ದು, ಆದರಲ್ಲಿ 260 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಕೌನ್ಸಿಲಿಂಗ್‌ಗೆ ಹಾಜರಾಗಿದ್ದು, ಈ ಪೈಕಿ 255 ವೈದ್ಯರು ನೇಮಕಾತಿ ಆದೇಶ ಪಡೆದು, ದಿನಾಂಕ: 04-09-2018 ರಿಂದ 230 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಪ್ರಸುತ ಕಾರ್ಯನಿರ್ವಹಿಸುತ್ತಿದ್ದಾರೆ.

- ಇಲಾಖೆಯಲ್ಲಿ ಖಾಲಿ ಇರುವ 1065 ತಜ್ಞ ವೈದ್ಯರನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕೋರಲಾಗಿತ್ತು, ಆದರೆ 382 ತಜ್ಞ ವೈದ್ಯರ ಅಂತಿಮ ಪಟ್ಟಿ ಪ್ರಕಟಣೆಗೊಂಡಿದ್ದು, ಆದರಲ್ಲಿ 265 ತಜ್ಞ ವೈದ್ಯರು ಕೌನ್ಸಿಲಿಂಗ್‌ಗೆ ಹಾಜರಾಗಿದ್ದು, ಈ ಪೈಕಿ 255 ತಜ್ಞ ವೈದ್ಯರು ನೇಮಕಾತಿ ಆದೇಶ ಪಡೆದು, ದಿನಾಂಕ: 16-07-2018 ರಿಂದ 156 ತಜ್ಞ ವೈದ್ಯರು ಪ್ರಸುತ ಕಾರ್ಯನಿರ್ವಹಿಸುತ್ತಿದ್ದಾರೆ.

- ವೈದ್ಯರ ನೇಮಕಾತಿ ಸಮಲೋಚನೆ ನಂತರ ಹೆಚ್ಚಿನ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇರುವ ತಜ್ಞರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವಂತೆ ಕರ್ನಾಟಕ ಲೋಕಸೇವಾ ಅಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗಿದೆ.

- ವೈದ್ಯರ ನೇಮಕಾತಿ ಸಮಾಲೋಚನೆ ನಂತರ ಹೆಚ್ಚಿನ ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇರುವುದರಿಂದ ಕೆಪಿಎಸ್‌ಸಿ ಯಿಂದ ತಜ್ಞ ವೈದ್ಯರು ಮತ್ತು ಸಾ.ಕ.ವೈದ್ಯಾಧಿಕಾರಿಗಳ ಹೆಚ್ಚುವರಿ ಪಟ್ಟಿಯನ್ನು ಕಳುಹಿಸಿಕೊಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿ:01.12.2018 ರಂದು ಪತ್ರ ಬರೆಯಲಾಗಿದೆ.

- ಇಲಾಖೆಯಲ್ಲಿ ತಜ್ಞರು ಹಾಗೂ ವೈದ್ಯಾಧಿಕಾರಿಗಳ ಕೊರತೆ ಇರುವುದರಿಂದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಖಾಲಿ ಇರುವ ತಜ್ಞ ವೈದ್ಯರನ್ನು ಎನ್.ಹೆಚ್.ಎಂ ಅಡಿಯಲ್ಲಿ ಬಿಡ್ ಮೂಲಕ ನೇಮಕಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಜೊತೆಗೆ, ಗುತ್ತಿಗೆ ಆಧಾರದಲ್ಲಿ ಹಾಗೂ ಕರೆ ಆಧಾರದಲ್ಲಿ (on call basis) ಸಹ ನೇಮಕಾತಿ ಮಾಡಲು ಅವಕಾಶ ಕಲ್ಪಿಸಿದೆ.

- ಹಾಗೆಯೇ, ವಯೋನಿವೃತ್ತಿ ಹೊಂದಿದ ತಜ್ಞರು ಹಾಗೂ ವೈದ್ಯರನ್ನು 65 ವರ್ಷ ವಯಸ್ಸಿನವರೆಗೆ ಪ್ರತೀ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

- ವೈದ್ಯರ ಪದವಿಯನ್ನು ಸರ್ಕಾರಿ ಕೋಟಾದಲ್ಲಿ ಪೂರ್ಣಗೊಳಿಸಿದ ವೈದ್ಯರುಗಳನ್ನು 1 ವರ್ಷ ಕಡ್ಡಾಯ ಗ್ರಾಮೀಣ ಸೇವೆಯಡಿಯಲ್ಲಿ ವೈದ್ಯರುಗಳನ್ನು ಖಾಲಿ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ.

- ರಾಷ್ಟ್ರೀಯ ಆರೋಗ್ಯ ಅಭಿಯಾನ ವೈದ್ಯರನ್ನು ಬಿಡ್ಡಿಂಗ್/ಗುತ್ತಿಗೆ ಎಂಬಿಬಿಎಸ್ ವೈದ್ಯರನ್ನು ಮತ್ತು ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.

- ಕಿರಿಯ ವೈದ್ಯಕೀಯ ಪ್ರಯೋಗಾಶಾಲಾ ಟೆಕ್ನಾಲಜಿಸ್ಟ್/ಫಾರ್ಮಸಿ, ಎಲೆಕ್ಟ್ರೀಷಿಯನ್/ಸೋಷಿಯಲ್‌ವರ್ಕರ್/ ಡೆಂಟಲ್ ಮೆಕ್ಯಾನಿಕ್/ ಗ್ರೂಪ್-ಡಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರದಿಂದ ಅನುಮತಿ ನೀಡಲಾಗಿದೆ.

- ಇಲಾಖೆಯ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ 2017-18ನೇ ಸಾಲಿನಲ್ಲಿ ವಿವಿಧ ಅರೆ ವೈದ್ಯಕೀಯ ಹುದ್ದೆಗಳಲ್ಲಿ 1665 ಹುದ್ದೆಗಳನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ.
- ಕಿರಿಯ ಆರೋಗ್ಯ ಸಹಾಯಕರು (ಮಹಿಳೆ)-496 ಹುದ್ದೆಗಳಿಗೆ ಪೋಲೀಸ್ ಪೂರ್ವಾಪರ/ಜಾತಿ ಸಿಂಧುತ್ವ/ಹೈ-ಕ ಮೀಸಲಾತಿ ಸಿಂಧುತ್ವ ವರದಿಗಳು ಸ್ವೀಕೃತವಾದ ನಂತರ ಹಂತ ಹಂತವಾಗಿ ನೇಮಕಾತಿ ಆದೇಶ ನೀಡಲಾಗುವುದು. ಮತ್ತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು-62 ಹುದ್ದೆಗಳಿಗೆ ಹೊರರಾಜ್ಯದ ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆದಿರುವ ಅಭ್ಯರ್ಥಿಗಳ ಅಂಕಪಟ್ಟಿಗಳ ನೈಜತೆಯ ಬಗ್ಗೆ ಪತ್ರ ಬರೆಯಲಾಗಿದ್ದು, ಸ್ಪಷ್ಟ ಮಾಹಿತಿ ಬಂದ ನಂತರ ತಾತ್ಕಾಲಿಕ ಆಯ್ಕೆಪಟ್ಟಿ ತಯಾರಿಸಲಾಗುವುದು. ಹಾಗೂ 889 ಶುಶ್ರೂಷಕರ ಹುದ್ದೆಗಳನ್ನು ಭರ್ತಿ ಮಾಡಲು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾವೆ ಹೂಡಿದ್ದು, ಸದರಿ ನ್ಯಾಯಾಲಯದಲ್ಲಿ ತಡೆಅಜ್ಞೆ ಆದೇಶ ಇರುವ ಹಿನ್ನಲ್ಲೆಯಲ್ಲಿ ಅಂತಿಮ ತೀರ್ಪು ಬಂದ ನಂತರ ನೇಮಕಾತಿ ಪ್ರಕ್ರಿಯೆ ಚಾಲನೆಗೊಳಿಸಲಾಗುವುದು.

- ಉಳಿದ 981 ಶುಶ್ರೂಷಕರ ಹುದ್ದೆಗಳಿಗೆ ನೇಮಕಾತಿ ಮಾಡಲು ಕ್ರಮ ಕೈಗೊಂಡಿದೆ ಹಾಗೂ ಪದೋನ್ನತಿ ನೀಡುವ ಮೂಲಕ ಸಹ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.

- ಪ್ರಸ್ತುತ ಇಲಾಖೆಯಲ್ಲಿ ಖಾಲಿ ಇರುವ ಪ್ಯಾರ ಮೆಡಿಕಲ್ ಹುದ್ದೆಗಳ ಪೈಕಿ 5274 ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:02.02.2018ರಂದು ಸರ್ಕಾರದ ಆರ್ಥಿಕ ಮತ್ತು ಆಡಳಿತ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆ ದೂರತೆ ನಂತರ ನೇಮಕಾತಿ ಪ್ರಕ್ರಿಯೆ ಚಾಲನೆ ನೀಡಲಾಗುವುದು

- ಇಲಾಖೆಯಲ್ಲಿ ಖಾಲಿ ಇರುವ 177 ಪ್ರಥಮ ದರ್ಜೆ ಸಹಾಯಕರು ಮತ್ತು 143 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ದೊರೆತಿದ್ದು, ಕೆಪಿಎಸ್‌ಸಿ ಮುಖಾಂತರ ಭರ್ತಿಮಾಡುವ ಸಲುವಾಗಿ ಪತ್ರ ಬರೆಯಲಾಗಿದೆ

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 89 SBV 18

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣ ಸೌಧ,
ಬೆಳಗಾವಿ, ದಿನಾಂಕ: 13-12-2018

3205
13/12/18

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಸುವರ್ಣ ಸೌಧ, ಬೆಳಗಾವಿ.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಶ್ರೀರಾಮುಲು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 930 ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಬಿ. ಶ್ರೀರಾಮುಲು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 930 ಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಿನಾಂಕ: 13-12-2018 ರಂದು ಸದನದಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

13/12/2018
(ಕೆ. ನಾರಾಯಣ)
ಸರ್ಕಾರದ ಉಪ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	930
ಮಾನ್ಯ ಸದಸ್ಯರ ಹೆಸರು	ಶ್ರೀ ಬಿ. ಶ್ರೀರಾಮುಲು (ಮೊಳಕಾಲ್ಮೂರು)
ಉತ್ತರಿಸಬೇಕಾದ ದಿನಾಂಕ	13-12-2018
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಜಾರಿಗೆ ತಂದಿರುವ "ಆರೋಗ್ಯ ಕರ್ನಾಟಕ" ಹಾಗೂ ಕೇಂದ್ರ ಸರ್ಕಾರದ "ಆಯುಷ್ಮಾನ್ ಭಾರತ" ಆರೋಗ್ಯ ಯೋಜನೆಗಳ ಸ್ವರೂಪವೇನು; ಇವುಗಳ ವಿಸ್ತಾರ ಅನುಷ್ಠಾನ ಕುರಿತು ವಿವರ ನೀಡುವುದು;	ಕರ್ನಾಟಕ ರಾಜ್ಯದ ಸಾರ್ವತ್ರಿಕ ಆರೋಗ್ಯ ರಕ್ಷಣೆ (UHC) ಯೋಜನೆಯಾದ "ಆರೋಗ್ಯ ಕರ್ನಾಟಕ" ಯೋಜನೆಯು ದಿನಾಂಕ 02-03-2018 ರಿಂದ ರಾಜ್ಯದಲ್ಲಿ ಜಾರಿಯಲ್ಲಿದೆ. ಈ ಯೋಜನೆಯ ಅಡಿಯಲ್ಲಿ ರಾಜ್ಯದ ಎಲ್ಲಾ ನಿವಾಸಿಗಳಿಗೆ 1530 ನಿರ್ದಿಷ್ಟ ಚಿಕಿತ್ಸೆಗಳಿಗೆ ಆರೋಗ್ಯ ಸೇವೆಯನ್ನು ಒದಗಿಸಲಾಗಿದೆ. ರಾಷ್ಟ್ರೀಯ ಭದ್ರತಾ ಕಾಯಿದೆ 2013 ರನ್ವಯ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಗಳು ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಮಾನದಂಡಗಳಾಗಿವೆ. ಈ ಯೋಜನೆಯ ಅಡಿಯಲ್ಲಿ ಆರ್ಥಿಕ ನೆರವನ್ನು ದ್ವಿತೀಯ ಸಂಕೀರ್ಣ ಚಿಕಿತ್ಸೆಗಾಗಿ ಒಂದು ಕುಟುಂಬಕ್ಕೆ ರೂ.30,000 ಮತ್ತು ಕುಟುಂಬಕ್ಕೆ ತೃತೀಯ ಹಂತದ ಚಿಕಿತ್ಸೆ ಅಗತ್ಯವಿದ್ದಲ್ಲಿ ಇದನ್ನು ರೂ.1.5 ಲಕ್ಷಕ್ಕೆ ವಿಸ್ತರಿಸಲಾಗುವುದು. ತುರ್ತು ಪ್ರಕರಣಗಳಲ್ಲಿ ಇನ್ನೂ ರೂ.50,000 ಹೆಚ್ಚಿಸಿ ಅರ್ಹತಾ ರೋಗಿಗಳಿಗೆ ಒಂದು ಕುಟುಂಬಕ್ಕೆ ಒಂದು ವರ್ಷಕ್ಕೆ ಒಟ್ಟು ರೂ.2.00 ಲಕ್ಷಗಳನ್ನು ಒದಗಿಸಲಾಗುವುದು. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ ಅನ್ವಯ ಅರ್ಹತಾ ಕುಟುಂಬಕ್ಕೆ ಸೇರಿಲ್ಲದ ಸಾಮಾನ್ಯ ರೋಗಿಗಳಿಗೆ ಸರ್ಕಾರವು ಪ್ಯಾಕೇಜ್ ದರಗಳ ಶೇಕಡಾ 30 ರಷ್ಟು ಭರಿಸುತ್ತದೆ. ಭಾರತ ಸರ್ಕಾರವು ಸಾಮಾಜಿಕ-ಆರ್ಥಿಕ ಜಾತಿಗಣತಿ (SECC) ಡೇಟಾ ಆಧಾರದ ಮೇಲೆ ಆರೋಗ್ಯ ಭದ್ರತೆ ಒದಗಿಸಲು 'ಆಯುಷ್ಮಾನ್ ಭಾರತ್-ನ್ಯಾಷನಲ್ ಹೆಲ್ತ್ ಪ್ರೊಟೆಕ್ಷನ್ ಮಿಷನ್, ಎನ್ನುವ ತನ್ನದೇ ಆದ ಸ್ವಂತ ಯೋಜನೆಯನ್ನು ದಿನಾಂಕ:25-09-2018ರಂದು ಜಾರಿಗೊಳಿಸಿದ್ದು, ನಂತರದಲ್ಲಿ ಇದನ್ನು 'ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ(PMJAY) ಎಂದು ಮರು ನಾಮಕರಣ ಮಾಡಲಾಗಿದೆ. ಈ ಯೋಜನೆಯಲ್ಲಿ ಒಟ್ಟು 1349 ಚಿಕಿತ್ಸಾ ವಿಧಾನಗಳಿರುತ್ತವೆ. ಸಾಮಾಜಿಕ-ಆರ್ಥಿಕ ಜಾತಿ ಗಣತಿಯ (SECC) ಡೇಟಾದಲ್ಲಿರುವ ಕುಟುಂಬಗಳು/RSBY ಕುಟುಂಬಗಳು ಈಗ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (PMJAY)ಯ ಫಲಾನುಭವಿಗಳಾಗುತ್ತಾರೆ. ರಾಜ್ಯದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯಡಿಲ್ಲಿ ನೋಂದಾಯಿತಗೊಂಡಿರುವ 62 ಲಕ್ಷ ಫಲಾನುಭವಿಗಳು "ಆಯುಷ್ಮಾನ್ ಭಾರತ" ಯೋಜನೆಯಲ್ಲಿ ಒಳಪಡುತ್ತಾರೆ ಹಾಗೂ ಒಂದು ಕುಟುಂಬಕ್ಕೆ ಒಂದು ವರ್ಷಕ್ಕೆ ರೂ. 5.00 ಲಕ್ಷಗಳವರೆಗೆ ಚಿಕಿತ್ಸೆ ಲಭ್ಯವಿರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಶೇ 60 ರಷ್ಟು ಹಾಗೂ ರಾಜ್ಯ ಸರ್ಕಾರದ ಪಾಲು ಶೇ 40 ರಷ್ಟು ಇರುತ್ತದೆ.

ಆ)	"ಆರೋಗ್ಯ ಕರ್ನಾಟಕ" ಹಾಗೂ "ಆಯುಷ್ಮಾನ್ ಭಾರತ" ಈ ಎರಡು ಆರೋಗ್ಯ ಯೋಜನೆಗಳನ್ನು ಜೊತೆಗೂಡಿಸಲಾಗಿದೆಯೇ ಮಾಡಿದ್ದಲ್ಲಿ; ಇದರ ಕೂಡುವಿಕೆಯ ವಿವರ ನೀಡುವುದು;	"ಆರೋಗ್ಯ ಕರ್ನಾಟಕ" ಹಾಗೂ "ಆಯುಷ್ಮಾನ್ ಭಾರತ" ಈ ಎರಡೂ ಯೋಜನೆಗಳ ಉದ್ದೇಶ ಹಾಗೂ ವ್ಯಾಪ್ತಿಗಳಲ್ಲಿ ಹೋಲಿಕೆ ಇದ್ದು ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಎರಡೂ ಯೋಜನೆಗಳನ್ನು ಸಂಯೋಜಿತಗೊಳಿಸಿ "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಎಂದು ಹೆಸರಿಸಲಾಗಿದೆ. ಸಂಯೋಜಿತ "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆಯನ್ನು ಭರವಸೆಯ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದೊಂದಿಗೆ ದಿನಾಂಕ 30.10.2018ರಿಂದ ಒಡಂಬಡಿಕೆ ಸಹಿ ಹಾಕಲಾಗಿದೆ ಮತ್ತು ಸಹಿ ಹಾಕಿದ ದಿನದಿಂದ ಜಾರಿಯಲ್ಲಿರುತ್ತದೆ. ಈ ಸಂಯೋಜಿತ ಯೋಜನೆಯ ಕುರಿತು ಸರ್ಕಾರಿ ಆದೇಶ ಸಂಖ್ಯೆ: ಆಕುಕ/69/ಸಿಜಿಇ/2018: ದಿನಾಂಕ:15.11.2018 ರಂದು ಹೊರಡಿಸಲಾಗಿದೆ.
ಇ)	ಕೇಂದ್ರದ "ಆಯುಷ್ಮಾನ್ ಭಾರತ್" ಈ ಯೋಜನೆಯಲ್ಲಿ ರೋಗಿಗಳು ಭರಿಸಲಾಗದ ನಿಬಂಧನೆಗಳಿವೆ ಎಂಬ ಆರೋಪ ಸರಿಯೇ;	ಸಾಮಾಜಿಕ-ಆರ್ಥಿಕ ಜಾತಿ ಗಣತಿಯ (SECC) ಡೇಟಾದಲ್ಲಿರುವ ಕುಟುಂಬಗಳು/RSBY ಕುಟುಂಬಗಳು ಈಗ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (PMJAY)ಯ ಫಲಾನುಭವಿಗಳಾಗುತ್ತಾರೆ. ರಾಜ್ಯದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯಡಿಲ್ಲಿ ನೋಂದಾಯಿತಗೊಂಡಿರುವ 62 ಲಕ್ಷ ಫಲಾನುಭವಿಗಳು "ಆಯುಷ್ಮಾನ್ ಭಾರತ" ಯೋಜನೆಯಲ್ಲಿ ಒಳಪಡಲ್ಲಿದ್ದು, ಈ ಯೋಜನೆಯಲ್ಲಿ ರೋಗಿಗಳು ಭರಿಸಲಾಗದ ನಿಬಂಧನೆಗಳು ಇರುವುದಿಲ್ಲ.
ಈ)	ಸದರಿ ಆರೋಗ್ಯ ಕರ್ನಾಟಕ ಮತ್ತು ಆಯುಷ್ಮಾನ್ ಭಾರತ್ ಯೋಜನೆಗಳ ನಿಬಂಧನೆಗಳಾವುವು?	ಯೋಜನೆಯಡಿ ಆರೋಗ್ಯ ಸೇವೆಯ ಸೌಲಭ್ಯಗಳನ್ನು ಪಡೆದುಕೊಳ್ಳುವ ರೋಗಿಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ: • ಅರ್ಹತಾ ರೋಗಿ: ಕರ್ನಾಟಕ ರಾಜ್ಯದ ನಿವಾಸಿಯಾಗಿರುವ ಒಬ್ಬ ರೋಗಿಯು ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ"ಕ್ಕೆ ಸೇರಿರುವರು; ಈ ವರ್ಗಕ್ಕೆ ಸಾಮಾಜಿಕ-ಆರ್ಥಿಕ ಜಾತಿ ಗಣತಿಯ (SECC) ಡೇಟಾ ದಲ್ಲಿರುವ ಫಲಾನುಭವಿಗಳು ಮತ್ತು ಈ ಹಿಂದೆ ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯ ನೋಂದಾಯಿತ ಫಲಾನುಭವಿಗಳು. • ಸಾಮಾನ್ಯ ರೋಗಿ: ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ" ವ್ಯಾಖ್ಯಾನದಡಿ ಸೇರಿಲ್ಲದೇ ಇರುವ ಅಥವಾ ಅರ್ಹ ಕುಟುಂಬಕ್ಕೆ ಸೇರಿದ ಕಾರ್ಡ್‌ನ್ನು ಒದಗಿಸದೇ ಇರುವವರು. **ಶಿಫಾರಸ್ಸು ವ್ಯವಸ್ಥೆ (ರೆಫರಲ್):** • ನಿಗದಿತ ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆಯ ಅಗತ್ಯವು ರೋಗಿಗೆ ಇದ್ದಲ್ಲಿ, ಅಥವಾ ನಿಗಧಿತ ತೃತೀಯ ಹಂತದ ಕಾಯಿಲೆಗಳಿಗೆ ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಸಮೀಪದ ತಾಲೂಕು ಅಥವಾ ಜಿಲ್ಲಾ ಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆಯ ವೈದ್ಯರನ್ನು ಮೊದಲು ಸಂಪರ್ಕಿಸಬೇಕು. ಆ ವೈದ್ಯರು ನೀಡುವ ಆರೋಗ್ಯ ಸಲಹೆ, ಚಿಕಿತ್ಸಾ ವಿವರಗಳು ಮತ್ತು ಚಿಕಿತ್ಸಾ ಕ್ಷಮತೆ ಪ್ರಸ್ತುತ ವೈದ್ಯಕೀಯ ಸಾಮರ್ಥ್ಯವನ್ನು ಆಧರಿಸಿ ಅದೇ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಚಿಕಿತ್ಸೆಯನ್ನು ಕೊಡಬಹುದು ಅಥವಾ ಅದೇ ಜಿಲ್ಲೆಯ ಅಥವಾ ಪಕ್ಕದ ಜಿಲ್ಲೆಯ ಮೇಲಿನ ಸ್ತರದ ಸಾರ್ವಜನಿಕ ಆರೋಗ್ಯ ಸಂಸ್ಥೆಗೆ ಶಿಫಾರಸ್ಸು

		ಮಾಡಲಾಗುವುದು. ರೋಗಿಯು ಇಚ್ಛಿಸಿದಲ್ಲಿ, ರಾಜ್ಯದಲ್ಲಿನ ಯಾವುದೇ ಜಿಲ್ಲೆಗಳಲ್ಲಿನ ಶಿಫಾರಸುಗೊಂಡ (ರೆಫರಲ್) ರೋಗಿಯು ರಾಜ್ಯದ ರಾಜಧಾನಿಯ ಅತ್ಯುನ್ನತ ಕೇಂದ್ರಗಳಲ್ಲಿ ಅಥವಾ ಹೆಚ್ಚಿನ ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. • ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೋಗ ನಿರ್ಣಯ ಮಾಡಲು ಅವಶ್ಯಕವಿರುವ ವೈದ್ಯಕೀಯ ಪರೀಕ್ಷೆ/ಡಯಾಗ್ನೋಸ್ಟಿಕ್ ಸೌಲಭ್ಯಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ರೋಗ ನಿರ್ಣಯ ಪರೀಕ್ಷೆಗಳಿಗಾಗಿ ನೋಂದಾಯಿತ ವೈದ್ಯಕೀಯ ಪರೀಕ್ಷೆ / ಡಯಾಗ್ನೋಸ್ಟಿಕ್ ಪ್ರಯೋಗಾಲಯಗಳಿಗೆ ರೆಫರ್ ಮಾಡಲು ಅವಕಾಶವಿರುತ್ತದೆ. • ಒಂದು ವೇಳೆ, ಅಗತ್ಯವಿರುವ ಸಂಕೀರ್ಣ ದ್ವಿತೀಯ ಆರೋಗ್ಯ ಆರೈಕೆ ಚಿಕಿತ್ಸೆ ಅಥವಾ ತೃತೀಯ ಹಂತದ ಆರೋಗ್ಯ ಆರೈಕೆ ಚಿಕಿತ್ಸೆಯು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ದೊರಕದಿದ್ದಲ್ಲಿ, ನೋಂದಾಯಿಸಿಕೊಂಡಿರುವ ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ರೆಫರ್ ಮಾಡಲಾಗುವುದು. **ತುರ್ತು ಸಂದರ್ಭದ ಆರೋಗ್ಯ ಆರೈಕೆ ಸೇವೆಗಳು:** ತುರ್ತು ಸಮಯದಲ್ಲಿ ಫಲಾನುಭವಿಗಳು (ರೋಗಿಗಳಿಗೆ) ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಅಥವಾ ಯಾವುದೆ ಸರ್ಕಾರಿ ಆಸ್ಪತ್ರೆಗಳಲ್ಲಿ ರೇಫರಲ್ ಇಲ್ಲದೆ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಆರೋಗ್ಯ ಕರ್ನಾಟಕ ಯೋಜನೆಯಡಿ 169 ತುರ್ತು ಚಿಕಿತ್ಸಾ ವಿಧಾನಗಳನ್ನು ಗುರುತಿಸಲಾಗಿದೆ.

ಆಕುಕ 89 ಎಸ್‌ಬಿವಿ 2018

(ಶಿವಾನಂದ ಎಸ್. ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಪ್ರ.ಸಂ:930ಕ್ಕೆ ಅನುಬಂಧ

ಸಂಯೋಜಿತ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ರೂಪುರೇಷೆಗಳು

ವ್ಯಾಪ್ತಿ:

ಸಂಯೋಜಿತ ಆರೋಗ್ಯ ಯೋಜನೆಯು ಪ್ರಾಥಮಿಕ ಆರೋಗ್ಯ ಆರೈಕೆ, ಸರಳ ದ್ವಿತೀಯ ಆರೋಗ್ಯ ಆರೈಕೆ-291 ಚಿಕಿತ್ಸಾ ವಿಧಾನಗಳು, ಕ್ಲಿಷ್ಟಕರ ದ್ವಿತೀಯ ಆರೋಗ್ಯ ಆರೈಕೆ- 254 ಚಿಕಿತ್ಸಾ ವಿಧಾನಗಳು, ತೃತೀಯ ಆರೋಗ್ಯ ಆರೈಕೆ- 900 ಚಿಕಿತ್ಸಾ ವಿಧಾನಗಳು ಮತ್ತು ತುರ್ತು ಆರೋಗ್ಯ ಆರೈಕೆಗಳಿಗೆ 169 ಚಿಕಿತ್ಸಾ ವಿಧಾನಗಳು- ನಿರ್ದಿಷ್ಟ ಪಡಿಸಿರುವಂತೆ 1614 ಪರಿಷ್ಕೃತ ಚಿಕಿತ್ಸಾ ವಿಧಾನಗಳಿರುತ್ತದೆ.

ರೋಗಿಗಳ ನೊಂದಣಿ :

ನಿರ್ದಿಷ್ಟ ಪಡಿಸಿರುವ ನೊಂದಣಿ ಕೇಂದ್ರಗಳಲ್ಲಿ ರೋಗಿಗಳು ಮೊದಲ ಬಾರಿಗೆ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಚಿಕಿತ್ಸೆಗಾಗಿ ಮೊದಲ ಬಾರಿಗೆ ಸಂಪರ್ಕಿಸಿದಾಗ ಅಳವಡಿಸಿರುವ ಐಟಿ ಸಾಫ್ಟ್‌ವೇರ್ ಬಳಸಿಕೊಂಡು ಅವರನ್ನುಒಂದು ಬಾರಿ ನೋಂದಣಿ ಮಾಡಿಕೊಳ್ಳಬೇಕು. ತುರ್ತು ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಶಿಫಾರಸಿನ ಹೊರತಾಗಿ ದಾಖಲಿಸಿಕೊಂಡಿರುವ ಖಾಸಗಿ ಆಸ್ಪತ್ರೆಯನ್ನು ಒಬ್ಬ ರೋಗಿಯು ಸಂಪರ್ಕಿಸಿದಲ್ಲಿ ನಿಯೋಜಿತ ದಾಖಲಾತಿ ಕೇಂದ್ರ ಅಥವಾ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಲ್ಲಿಸಬಹುದು. ಆ ಸನ್ನಿವೇಶದಲ್ಲಿ ಈ ಒಂದು ಚಿಕಿತ್ಸೆಗಾಗಿ ತಮ್ಮ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಯನ್ನು ಸಲ್ಲಿಸುವ ಮೂಲಕ ಚಿಕಿತ್ಸೆಯನ್ನು ಪಡೆಯಬಹುದು.

'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯಡಿಯಲ್ಲಿ ನೋಂದಾಯಿತ ಕಾರ್ಡ್‌ನ್ನು "ಎಬಿ-ಎಆರ್‌ಕೆ" ಕಾರ್ಡ್ ಎಂದು ಕರೆಯಲಾಗುವುದು ಮತ್ತು "ಎಬಿ-ಎಆರ್‌ಕೆ" ಎಂದು ಕರೆಯಲಾಗುವ ಕಾರ್ಡನ್ನು ನೋಂದಣಿ ಸಮಯದಲ್ಲಿ ವಿಶಿಷ್ಟ ಐಡಿ ಸಂಖ್ಯೆಯೊಂದಿಗೆ ನೀಡಲಾಗುವುದು

ಯಶಸ್ವಿಯಾಗಿ ದಾಖಲಾತಿ ಪಡೆಯುವ 'ಫಲಾನುಭವಿಗಳಿಗೆ ಈ ರೀತಿ ಸೃಷ್ಟಿಯಾಗುವ ವಿಶೇಷ ಗುರುತು (ಐಡಿ)ಯನ್ನು ನಿಗದಿತ ರೂ.10/- ಶುಲ್ಕದೊಂದಿಗೆ ನೀಡಲಾಗುತ್ತದೆ.

ಒಂದು ವೇಳೆ ಈ ಹೆಲ್ತ್‌ಕಾರ್ಡ್ ಕಳೆದು ಹೋದರೆ ಯಾವುದೇ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಅಥವಾ ನೋಂದಣಿ ಕೇಂದ್ರಗಳಲ್ಲಿ ಆಧಾರ್ ಅಥವಾ ಪಡಿತರಚೀಟಿ ಹಾಜರುಪಡಿಸಿ, ಆಧಾರ್ ದೃಢೀಕರಣದ ನಂತರ ರೂ.20/-(ಇಪ್ಪತ್ತು) ಪಾವತಿಸಿ ನಕಲು ಹೆಲ್ತ್‌ಕಾರ್ಡ್‌ನ್ನು ಪಡೆದುಕೊಳ್ಳುವುದು.

ಆಧಾರ್ ಕಾರ್ಡು ಹೊಂದಿಲ್ಲದ ರೋಗಿಗೆ, ಪಡಿತರಚೀಟಿ ಆಧಾರದ ಮೇಲೆ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ನೊಂದಣಿ ಮಾಡಲಾಗುವುದು. ಅಂತಹ ವ್ಯಕ್ತಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಚಿಕಿತ್ಸೆ ಒದಗಿಸಲಾಗುವುದು. ಆದರೆ ಖಾಸಗಿ ಆಸ್ಪತ್ರೆಯಲ್ಲಿ ರೆಫರಲ್ ಮೂಲಕ ಚಿಕಿತ್ಸೆ ಪಡೆಯಲು ಆಧಾರ್ ಅನ್ನು ನೊಂದಣಿ ಮಾಡುವುದು ಅವಶ್ಯವಿರುತ್ತದೆ.

ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳ ಮೂಲಕ ಕಾರ್ಡ್‌ಗಳನ್ನು ವಿತರಿಸಲು ಇ-ಆಡಳಿತ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಡುಗಳನ್ನು ವಿತರಿಸಲಾಗುತ್ತದೆ.

ಯೋಜನೆಯಡಿ ಆರೋಗ್ಯ ಸೇವೆಯ ಸೌಲಭ್ಯಗಳನ್ನು ಪಡೆದುಕೊಳ್ಳುವ ರೋಗಿಗಳನ್ನು ಈ ಕೆಳಗಿನಂತೆ ವಿಂಗಡಿಸತಕ್ಕದ್ದು:

- **ಅರ್ಹತಾ ರೋಗಿ:** ಕರ್ನಾಟಕರಾಜ್ಯದ ನಿವಾಸಿಯಾಗಿರುವ ಒಬ್ಬ ರೋಗಿಯು ರಾಷ್ಟ್ರೀಯಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬ"ಕ್ಕೆ ಸೇರಿರುವರು; ಈ ವರ್ಗಕ್ಕೆ ಸಾಮಾಜಿಕ-ಆರ್ಥಿಕ ಜಾತಿಗಣತಿಯ (SECC) ಡೇಟಾದಲ್ಲಿರುವ ಫಲಾನುಭವಿಗಳು ಮತ್ತು ಈ ಹಿಂದೆ ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯ ನೊಂದಾಯಿತ ಫಲಾನುಭವಿಗಳು.
- **ಸಾಮಾನ್ಯ ರೋಗಿ:** ಕರ್ನಾಟಕರಾಜ್ಯದ ನಿವಾಸಿಯಾಗಿದ್ದು, ರಾಷ್ಟ್ರೀಯ ಆಹಾರ ಭದ್ರತೆಕಾಯ್ದೆ, 2013ರಡಿ "ಅರ್ಹ ಕುಟುಂಬ" ವ್ಯಾಖ್ಯಾನದಡಿ ಸೇರಿಲ್ಲದೇ ಇರುವ ಅಥವಾ ಅರ್ಹ ಕುಟುಂಬಕ್ಕೆ ಸೇರಿದ ಕಾರ್ಡ್‌ನ್ನು ಒದಗಿಸದೇ ಇರುವವರು.

ಸರ್ಕಾರದಿಂದ ಭರಿಸುವ ವೈದ್ಯಕೀಯ ವೆಚ್ಚ:

1. "ಅರ್ಹತಾ ರೋಗಿ"ಗೆ ನಿಗಧಿತ ಸಾಮಾನ್ಯ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆ, ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆ, ತೃತೀಯ ಹಂತದ ಆರೋಗ್ಯ ಚಿಕಿತ್ಸೆ ಮತ್ತು ತುರ್ತು ಆರೋಗ್ಯ ಚಿಕಿತ್ಸೆಗೆ ವರ್ಷಕ್ಕೆ ರೂ.5.00 ಲಕ್ಷಗಳವರೆಗೆ ಒದಗಿಸಲಾಗುವುದು. ಇದನ್ನು ಪ್ರತಿ ಕುಟುಂಬಕ್ಕೆ ಫ್ಲೋಟರ್ ಆಧಾರದಲ್ಲಿ ಒದಗಿಸಿದ್ದು, ಕುಟುಂಬದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಸಂಪೂರ್ಣವಾಗಿ ರೂ.5.00 ಲಕ್ಷದ ಮಿತಿಯ ಸೇವೆಯನ್ನು ಪಡೆದುಕೊಳ್ಳಬಹುದು.

2. "ಸಾಮಾನ್ಯ ರೋಗಿ"ಗೆ ಸೇವಾ ಪ್ರಯೋಜನದ ಮಿತಿ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ-ಪಾವತಿಯ ಆಧಾರದ ಮೇಲೆ ಛಟ್ಟಾರೆ ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.

ರೆಫರಲ್ ಇಲ್ಲದ ರೋಗಿ:

ಅರ್ಹತಾ ರೋಗಿಯಾಗಲಿ ಅಥವಾ ಸಾಮಾನ್ಯ ರೋಗಿಯಾಗಲಿ ಸರ್ಕಾರಿ ಆಸ್ಪತ್ರೆಗಳಿಂದ ರೆಫರ್ ಆಗದೆ ನೇರವಾಗಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಲ್ಲಿ, ಅಂತಹ ಚಿಕಿತ್ಸೆಗೆ ಮರುಪಾವತಿಗೆ ಅವಕಾಶ ಇರುವುದಿಲ್ಲ. ಅಂತಹ ರೋಗಿ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಸ್ವತಃ ಭರಿಸಬೇಕಾಗುತ್ತದೆ.

ಶಿಫಾರಸ್ಸು ವ್ಯವಸ್ಥೆ (ರೆಫರಲ್):

1. ನಿಗಧಿತ ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಚಿಕಿತ್ಸೆಯ ಅಗತ್ಯವು ರೋಗಿಗೆ ಇದ್ದಲ್ಲಿ, ಅಥವಾ ನಿಗಧಿತ ತೃತೀಯ ಹಂತದ ಕಾಯಿಲೆಗಳಿಗೆ ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಸಮೀಪದ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆಯ ವೈದ್ಯರನ್ನು ಮೊದಲು ಸಂಪರ್ಕಿಸಬೇಕು. ಆ ವೈದ್ಯರು ನೀಡುವಆರೋಗ್ಯ ಸಲಹೆ, ಚಿಕಿತ್ಸಾ ವಿವರಗಳು ಮತ್ತು ಚಿಕಿತ್ಸಾ

ಕ್ಷಮತೆ ಪ್ರಸ್ತುತ ವೈದ್ಯಕೀಯ ಸಾಮರ್ಥ್ಯವನ್ನು ಆಧರಿಸಿ ಅದೇ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಚಿಕಿತ್ಸೆಯನ್ನು ಕೊಡಬಹುದು ಅಥವಾ ಅದೇ ಜಿಲ್ಲೆಯ ಅಥವಾ ಪಕ್ಕದ ಜಿಲ್ಲೆಯ ಮೇಲಿನ ಸ್ಥರದ ಸಾರ್ವಜನಿಕ ಆರೋಗ್ಯ ಸಂಸ್ಥೆಗೆ ಶಿಫಾರಸ್ಸು ಮಾಡಲಾಗುವುದು. ರೋಗಿಯು ಇಚ್ಚಿಸಿದಲ್ಲಿ, ರಾಜ್ಯದಲ್ಲಿನ ಯಾವುದೇ ಜಿಲ್ಲೆಗಳಲ್ಲಿನ ಶಿಫಾರಸುಗೊಂಡ (ರೆಫರಲ್) ರೋಗಿಯು ರಾಜ್ಯದ ರಾಜಧಾನಿಯ ಅತ್ಯುನ್ನತ ಕೇಂದ್ರಗಳಲ್ಲಿ ಅಥವಾ ಹೆಚ್ಚಿನ ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು.

2. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೋಗ ನಿರ್ಣಯ ಮಾಡಲು ಅವಶ್ಯಕವಿರುವ ವೈದ್ಯಕೀಯ ಪರೀಕ್ಷೆ/ಡಯಾಗ್ನೋಸ್ಟಿಕ್ ಸೌಲಭ್ಯಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ರೋಗ ನಿರ್ಣಯ ಪರೀಕ್ಷೆಗಳಿಗಾಗಿ ನೋಂದಾಯಿತ ವೈದ್ಯಕೀಯ ಪರೀಕ್ಷೆ / ಡಯಾಗ್ನೋಸ್ಟಿಕ್ ಪ್ರಯೋಗಾಲಯಗಳಿಗೆ ರೆಫರ್ ಮಾಡಲು ಅವಕಾಶವಿರುತ್ತದೆ.
3. ಒಂದು ವೇಳೆ, ಅಗತ್ಯವಿರುವ ಸಂಕೀರ್ಣ ದ್ವಿತೀಯ ಆರೋಗ್ಯ ಆರೈಕೆ ಚಿಕಿತ್ಸೆ ಅಥವಾ ತೃತೀಯ ಹಂತದ ಆರೋಗ್ಯ ಆರೈಕೆ ಚಿಕಿತ್ಸೆಯು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ದೊರಕದಿದ್ದಲ್ಲಿ, ನೋಂದಾಯಿಸಿಕೊಂಡಿರುವ ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ರೆಫರ್ ಮಾಡಲಾಗುವುದು.

ರೋಗಿಗಳ ಸ್ವಾಧೀನ:

ರೋಗಿಯು ಚಿಕಿತ್ಸೆ ಪಡೆಯಲು ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ನಿಯೋಜಿತ ಪ್ರಾಧಿಕಾರವನ್ನು ನೋಂದಣೆಗಾಗಿ ನಿಗಧಿಪಡಿಸಿರುವ ಕೇಂದ್ರಗಳಲ್ಲಿ ಒಂದು ಬಾರಿ ಮಾತ್ರ ಸಂಪರ್ಕಿಸಬೇಕು. ಯಾವುದೇ ಅನುಸರಣಾ ಭೇಟಿ ಅಥವಾ ನಂತರದ ಯಾವುದೇ ಚಿಕಿತ್ಸೆಯ ಹೊರರೋಗಿ ವಿಭಾಗದ ಭೇಟಿಗಾಗಿ ಆಧಾರ್ ಪ್ರಮಾಣೀಕರಣದ ಆಧಾರದ ಮೇಲೆ "ಎಬಿ-ಎಆರ್‌ಕೆ" ಕಾರ್ಡ್ ಒದಗಿಸಿದರೆ ಸಾಕಾಗುತ್ತದೆ.

ಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳು:

ನಿಗಧಿತ ಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾತ್ರವೇ ಒದಗಿಸಲಾಗುವುದು.

ಸಾಮಾನ್ಯ ದ್ವಿತೀಯ ಆರೋಗ್ಯ ಆರೈಕೆ ಸೇವೆಗಳು:

ನಿಗಧಿತ ಸಾಮಾನ್ಯ ದ್ವಿತೀಯ ಆರೋಗ್ಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರವೇ ಒದಗಿಸಲಾಗುವುದು.

ಕ್ಲಿಷ್ಟಕರ ದ್ವಿತೀಯ ಹಂತದ ಆರೋಗ್ಯ ಆರೈಕೆ ಸೇವೆಗಳು:

ನಿಗಧಿತ ದ್ವಿತೀಯ ಆರೋಗ್ಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒದಗಿಸಲಾಗುವುದು. ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಾಮರ್ಥ್ಯವಿಲ್ಲದಿದ್ದಲ್ಲಿ ರೆಪರಲ್ ಮೂಲಕ ಉನ್ನತ

ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು ಅಲ್ಲಿಯೂ ಸಾಮಥ್ಯವಿಲ್ಲದಿದ್ದಲ್ಲಿ ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

ತೃತೀಯ ಹಂತದ ಆರೋಗ್ಯ ಆರೈಕೆ ಸೇವೆಗಳು:

ನಿಗಧಿತ ತೃತೀಯ ಹಂತದ ಆರೋಗ್ಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒದಗಿಸಲಾಗುವುದು. ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಾಮರ್ಥ್ಯವಿಲ್ಲದಿದ್ದಲ್ಲಿ ರೆಪರಲ್ ಮೂಲಕ ಉನ್ನತ ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು ಅಲ್ಲಿಯೂ ಸಾಮಥ್ಯವಿಲ್ಲದಿದ್ದಲ್ಲಿ ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

ತುರ್ತು ಸಂದರ್ಭದ ಆರೋಗ್ಯ ಆರೈಕೆ ಸೇವೆಗಳು:

ತುರ್ತು ಸಮಯದಲ್ಲಿ ಫಲಾನುಭವಿಗಳಿಗೆ (ರೋಗಿಗಳಿಗೆ) ನೋಂದಾಯಿತ ಖಾಸಗಿ ಆಸ್ಪತ್ರೆಯಾಗಲಿ ಯಾವುದೆ ಸರ್ಕಾರಿ ಆಸ್ಪತ್ರೆಯಾಗಲಿ ರೇಫರಲ್ ಇಲ್ಲದೆ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಈ ಕಾಯಿಲೆಗಳನ್ನು ಆರೋಗ್ಯ ಕರ್ನಾಟಕ ಅಡಿ 169 ತುರ್ತು ಚಿಕಿತ್ಸಾ ವಿಧಾನಗಳನ್ನು ಗುರುತಿಸಲಾಗಿದೆ.

******

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 63 SMM 18

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣ ಸೌಧ,
ಬೆಳಗಾವಿ, ದಿನಾಂಕ: 13-12-2018

108 U/S
13/12/18

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಸುವರ್ಣ ಸೌಧ, ಬೆಳಗಾವಿ.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಸುವರ್ಣ ಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಹರೀಶ್ ಪೂಂಜಾ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1381ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಹರೀಶ್ ಪೂಂಜಾ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1381 ಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಿನಾಂಕ: 13-12-2018 ರಂದು ಸದನದಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಕೆ. ನಾರಾಯಣ) 13/12/2018
ಸರ್ಕಾರದ ಉಪ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 52 ಎಂಎಲ್ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1371ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1371ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,
12/12/18
(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1371
ಸದಸ್ಯರ ಹೆಸರು	:	ಶ್ರೀ.ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ)
ಉತ್ತರಿಸುವ ದಿನಾಂಕ	:	13.12.2018
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ)	ತುಂಗಭದ್ರಾ ಜಲಾಶಯ ಕೊಪ್ಪಳ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳ ಜೀವನಾಡಿಯಾಗಿದ್ದು, ಸಾಕಷ್ಟು ಪ್ರಮಾಣದಲ್ಲಿ ಹೂಳು ತುಂಬಿದ್ದು ಹೂಳು ಎತ್ತುವುದರಲ್ಲಿ ಸರ್ಕಾರ ಕ್ರಮಕೈಗೊಂಡಿದೆಯೇ:	ತುಂಗಭದ್ರಾ ಜಲಾಶಯವು 1953ರಲ್ಲಿ ನಿರ್ಮಾಣವಾಗಿದ್ದು, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯದ ಅಂತರರಾಜ್ಯ ನೀರಾವರಿ ಯೋಜನೆಯಾಗಿದ್ದು, ಸದರಿ ಜಲಾಶಯವು ನಿರ್ಮಾಣಗೊಂಡಾಗ 133.00 ಟಿಎಂಸಿ ಯಷ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಸದರಿ ಜಲಾಶಯದಲ್ಲಿ 2008ರ ಹೈಡ್ರೋಗ್ರಾಫಿಕ್ ಸರ್ವೆಯನ್ವಯ ನೀರಿನ ಸಾಮರ್ಥ್ಯವು 100.855 ಟಿಎಂಸಿ ಯಷ್ಟು ಇರುವುದಾಗಿ ಹಾಗೂ ಹೂಳಿನ ಪ್ರಮಾಣವು 32.145 ಟಿಎಂಸಿ ಯಷ್ಟು ಅಂದಾಜಿಸಲಾಗಿದೆ. ಸದರಿ ಹೂಳಿನಿಂದ ಉಂಟಾದ ಜಲಾಶಯದ ಸಾಮರ್ಥ್ಯವನ್ನು ಮರು ಭರಿಸಲು ವಿವಿಧ ಪರ್ಯಾಯ ಮಾರ್ಗಗಳನ್ನು ಪರಿಶೀಲಿಸಿ ಡಿಪಿಆರ್ ತಯಾರಿಸಲು ಜಾಗತಿಕ ಮಟ್ಟದ (Global Expression of Interest) "ಪೂರ್ವಾಹತೆ ಮತ್ತು ಆಸಕ್ತಿ" ವ್ಯಕ್ತಪಡಿಸಲು ಆಹ್ವಾನಿಸಲಾಗಿತ್ತು. ಆದರೆ ಭಾಗವಹಿಸಿದ ಸಂಸ್ಥೆಗಳಿಂದ ಯಾವುದೇ ಸಮರ್ಪಕವಾದ ಮಾರ್ಗವು ದೊರೆತಿರುವುದಿಲ್ಲ.
ಆ)	ಹಾಗಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ; ಇದರ ಮಾನದಂಡಗಳೇನು;	ಈ ಕುರಿತಂತೆ ತುಂಗಭದ್ರಾ ಜಲಾಶಯದ ಸಂಗ್ರಹಣಾ ಸಾಮರ್ಥ್ಯದ ಕೊರತೆಯನ್ನು ನೀಗಿಸುವ ಪರ್ಯಾಯ ಮಾರ್ಗೋಪಾಯವಾಗಿ ಪ್ರವಾಹ ಹರಿವು ನಾಲೆ ಮೂಲಕ ನವಿಲೆ ಹತ್ತಿರ ಸಮತೋಲನ ಜಲಾಶಯ ನಿರ್ಮಿಸುವ ಕಾರ್ಯಸಾಧ್ಯತೆ ಅಧ್ಯಯನವನ್ನು ಹಾಗೂ ವಿಸ್ತೃತ ಯೋಜನಾ ವರದಿಯನ್ನು ಸಿದ್ದಪಡಿಸಲಾಗುವುದು ಎಂದು 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಸದರಿ ಪ್ರಸ್ತಾವನೆ ಕುರಿತಂತೆ ಕಾರ್ಯಸಾಧ್ಯತೆ ಅಧ್ಯಯನವನ್ನು ನಡೆಸಲು ಸಮಾಲೋಚಕರನ್ನು ನೇಮಿಸಲಾಗಿರುತ್ತದೆ. ತುಂಗಭದ್ರಾ ಜಲಾಶಯವು ಅಂತರರಾಜ್ಯ ಜಲಾಶಯವಾಗಿದ್ದು, ಇದರ ಸುಪರ್ದಿಯು ತುಂಗಭದ್ರಾ ಮಂಡಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಸಮಾಲೋಚಕರಿಂದ ವರದಿ ಬಂದ ನಂತರ ತುಂಗಭದ್ರಾ ಮಂಡಳಿಯ ಮುಂದೆ ಮಂಡಿಸಲು ಸೂಕ್ತ ಕ್ರಮ ಜರುಗಿಸಲಾಗುವುದು.
ಇ)	ಯಾವಾಗ ಕೆಲಸ ಪ್ರಾರಂಬಿಸಲಾಗುವುದು?	

ಜಸಂಇ 52 ಎಂ.ಎಲ್.ಎ 2018

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1371
ಸದಸ್ಯರ ಹೆಸರು	:	ಶ್ರೀ.ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ)
ಉತ್ತರಿಸುವ ದಿನಾಂಕ	:	13.12.2018
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ)	ತುಂಗಭದ್ರಾ ಜಲಾಶಯ ಕೊಪ್ಪಳ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳ ಜೀವನಾಡಿಯಾಗಿದ್ದು, ಸಾಕಷ್ಟು ಪ್ರಮಾಣದಲ್ಲಿ ಹೂಳು ತುಂಬಿದ್ದು ಹೂಳು ಎತ್ತುವುದರಲ್ಲಿ ಸರ್ಕಾರ ಕ್ರಮಕೈಗೊಂಡಿದೆಯೇ:	ತುಂಗಭದ್ರಾ ಜಲಾಶಯವು 1953ರಲ್ಲಿ ನಿರ್ಮಾಣವಾಗಿದ್ದು, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯದ ಅಂತರರಾಜ್ಯ ನೀರಾವರಿ ಯೋಜನೆಯಾಗಿದ್ದು, ಸದರಿ ಜಲಾಶಯವು ನಿರ್ಮಾಣಗೊಂಡಾಗ 133.00 ಟಿಎಂಸಿ ಯಷ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ಸದರಿ ಜಲಾಶಯದಲ್ಲಿ 2008ರ ಹೈಡ್ರೋಗ್ರಾಫಿಕ್ ಸರ್ವೆಯನ್ವಯ ನೀರಿನ ಸಾಮರ್ಥ್ಯವು 100.855 ಟಿಎಂಸಿ ಯಷ್ಟು ಇರುವುದಾಗಿ ಹಾಗೂ ಹೂಳಿನ ಪ್ರಮಾಣವು 32.145 ಟಿಎಂಸಿ ಯಷ್ಟು ಅಂದಾಜಿಸಲಾಗಿದೆ. ಸದರಿ ಹೂಳಿನಿಂದ ಉಂಟಾದ ಜಲಾಶಯದ ಸಾಮರ್ಥ್ಯವನ್ನು ಮರು ಭರಿಸಲು ವಿವಿಧ ಪರ್ಯಾಯ ಮಾರ್ಗಗಳನ್ನು ಪರಿಶೀಲಿಸಿ ಡಿಪಿಆರ್ ತಯಾರಿಸಲು ಜಾಗತಿಕ ಮಟ್ಟದ (Global Expression of Interest) "ಪೂರ್ವಾಹತೆ ಮತ್ತು ಆಸಕ್ತಿ" ವ್ಯಕ್ತಪಡಿಸಲು ಆಹ್ವಾನಿಸಲಾಗಿತ್ತು. ಆದರೆ ಭಾಗವಹಿಸಿದ ಸಂಸ್ಥೆಗಳಿಂದ ಯಾವುದೆ ಸಮರ್ಪಕವಾದ ಮಾರ್ಗವು ದೊರೆತಿರುವುದಿಲ್ಲ.
ಆ)	ಹಾಗಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ; ಇದರ ಮಾನದಂಡಗಳೇನು;	ಈ ಕುರಿತಂತೆ ತುಂಗಭದ್ರಾ ಜಲಾಶಯದ ಸಂಗ್ರಹಣಾ ಸಾಮರ್ಥ್ಯದ ಕೊರತೆಯನ್ನು ನೀಗಿಸುವ ಪರ್ಯಾಯ ಮಾರ್ಗೋಪಾಯವಾಗಿ ಪ್ರವಾಹ ಹರಿವು ನಾಲೆ ಮೂಲಕ ನವಿಲೆ ಹತ್ತಿರ ಸಮತೋಲನ ಜಲಾಶಯ ನಿರ್ಮಿಸುವ ಕಾರ್ಯಸಾಧ್ಯತೆ ಅಧ್ಯಯನವನ್ನು ಹಾಗೂ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುವುದು ಎಂದು 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಸದರಿ ಪ್ರಸ್ತಾವನೆ ಕುರಿತಂತೆ ಕಾರ್ಯಸಾಧ್ಯತೆ ಅಧ್ಯಯನವನ್ನು ನಡೆಸಲು ಸಮಾಲೋಚಕರನ್ನು ನೇಮಿಸಲಾಗಿರುತ್ತದೆ. ತುಂಗಭದ್ರಾ ಜಲಾಶಯವು ಅಂತರರಾಜ್ಯ ಜಲಾಶಯವಾಗಿದ್ದು, ಇದರ ಸುಪರ್ದಿಯು ತುಂಗಭದ್ರಾ ಮಂಡಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಸಮಾಲೋಚಕರಿಂದ ವರದಿ ಬಂದ ನಂತರ ತುಂಗಭದ್ರಾ ಮಂಡಳಿಯ ಮುಂದೆ ಮಂಡಿಸಲು ಸೂಕ್ತ ಕ್ರಮ ಜರುಗಿಸಲಾಗುವುದು.
ಇ)	ಯಾವಾಗ ಕೆಲಸ ಪ್ರಾರಂಬಿಸಲಾಗುವುದು?	

ಜಸಂಇ 52 ಎಂ.ಎಲ್.ಎ 2018

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 56 ಡಬ್ಲ್ಯೂಎಲ್ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 946ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 946ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ದಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

12/12/18

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 946
2. ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
3. ಉತ್ತರಿಸಬೇಕಾದ ದಿನಾಂಕ : 13.12.2018
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆ, ಬೈಲಹೊಂಗಲ ಮತ್ತು ಕಿತ್ತೂರು ಮತ ಕ್ಷೇತ್ರಗಳಲ್ಲಿ ಕೆರೆ ತುಂಬಿಸುವ ಯೋಜನೆ ಯಾವ ಹಂತದಲ್ಲಿದೆ; ಎಷ್ಟು ಹಣಕ್ಕಾಗಿ ಮಂಜೂರಾತಿ ನೀಡಲಾಗಿದೆ;	ಮಲಪ್ರಭಾ ನದಿಯಿಂದ ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 64 ಕೆರೆಗಳನ್ನು ತುಂಬುವ ಎರಡು ಹಂತಗಳಲ್ಲಿ ನೀರೆತ್ತುವ ಯೋಜನೆಗೆ ದಿನಾಂಕ:08.11.2017ರಲ್ಲಿ ರೂ.248.20 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.
ಆ)	ಈ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಮೇಲಿಂದ ಮೇಲೆ ಬರಗಾಲ ಬರುವುದರಿಂದ ಮತ್ತು ಯಾವುದೇ ನೀರಾವರಿ ಸೌಲಭ್ಯವಿಲ್ಲದಿರುವುದರಿಂದ ಕೆರೆ ತುಂಬಿಸುವುದು ಅತೀ ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ)	ಹಾಗಿದ್ದಲ್ಲಿ, ಸದರಿ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಮುಕ್ತಾಯಗೊಳಿಸುವುದು?	ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಕಾಮಗಾರಿಗೆ ಟೆಂಡರ್‌ನಲ್ಲಿ 24 ತಿಂಗಳ ಕಾಲಾವಧಿಯನ್ನು ನಿಗದಿಪಡಿಸಲಾಗಿದ್ದು, ಟೆಂಡರ್ ಅನುಮೋದನೆ ದೊರೆತ ನಂತರ ನಿಯಮಾನುಸಾರ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಜಸಂಇ 56 ಡಬ್ಲ್ಯೂಎಲ್ಎ 2018

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 60 ಡಬ್ಲ್ಯೂಬಿಎಂ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 983ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 983ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,
12/12/18

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 983
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ : 13.12.2018
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಗುತ್ತಿ ಬಸವಣ್ಣ ಏತ ನೀರಾವರಿ (ಐ.ಎಲ್.ಸಿ) ಕಿ.ಮೀ. 0.00 ದಿಂದ 147.00ರವರೆಗೆ ಕಾಲುವೆಯ ಕಾಮಗಾರಿಯು ಸಂಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಸದರಿ ಕಾಲುವೆ ಕಿ.ಮೀ. 97.00ರವರೆಗೆ ಮಾತ್ರ ಹರಿಯುತ್ತಿದ್ದು, ನಾಲೆಯ ಮುಂದಿನ ಭಾಗದವರೆಗೆ ನೀರು ಹರಿಯದೇ ಇರುವುದರಿಂದ ರೈತರು ತೀವ್ರ ಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;	ಇಂಡಿ ಏತ ನೀರಾವರಿ ಕಾಲುವೆ ಕಿ.ಮೀ.97.30 ರಿಂದ 147.00 ರವರೆಗಿನ ವಿಸ್ತರಣೆಯು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿಯ ಒಂದು ಉಪಯೋಜನೆಯಾಗಿದ್ದು, ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಇನ್ನೂ ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆಗೊಂಡಿರದ ಕಾರಣ ಪ್ರಸ್ತುತ ಪೂರ್ಣಗೊಂಡಿರುವ ಇಂಡಿ ಏತ ನೀರಾವರಿ ಮುಖ್ಯ ಕಾಲುವೆ ವಿಸ್ತರಣೆ ಕಿ.ಮೀ.97.30 ರಿಂದ 128.00 ರವರೆಗಿನ ಕಾಲುವೆ ಜಾಲದಡಿ ಪ್ರಾಯೋಗಿಕವಾಗಿ (On Trial Basis) ನೀರು ಹರಿಬಿಡಲಾಗಿರುತ್ತದೆ.
ಇ)	ಸದರಿ ಕಾಲುವೆ ಕಿ.ಮೀ. 97.00 ರಿಂದ 147.00ರವರೆಗೆ ನೀರು ಹರಿಸದಿರಲು ಕಾರಣಗಳೇನು;	
ಈ)	ಈ ಕಾಲುವೆಯಲ್ಲಿ ಕಿ.ಮೀ. 147.00ರವರೆಗೆ ನೀರು ಹರಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ?	ಇಂಡಿ ಏತ ನೀರಾವರಿ ಯೋಜನೆಯ ಕಾಲುವೆ ಜಾಲದ ಪ್ರಗತಿಯ ವಿವರಗಳ ಹಿನ್ನೆಲೆಯಲ್ಲಿ ಹಾಗೂ ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪು ಇನ್ನೂ ಕೇಂದ್ರ ಸರ್ಕಾರದಿಂದ ಅಧಿಸೂಚನೆಗೊಳ್ಳಬೇಕಾಗಿರುವ ಪ್ರಯುಕ್ತ ಪ್ರಸ್ತುತ ಇಂಡಿ ಏತ ನೀರಾವರಿ ಮುಖ್ಯ ಕಾಲುವೆ ವಿಸ್ತರಣೆ ಕಿ.ಮೀ.97.30 ರಿಂದ 147.00 ರವರೆಗಿನ ಕಾಲುವೆ ಜಾಲದಲ್ಲಿ (ಹಲವೆಡೆ ತುಂಬಿಕೊಂಡಿರುವ ಹೂಳು ತೆರವುಗೊಳಿಸುವುರೊಂದಿಗೆ) ಮುಂಬರುವ 2019-20ನೇ ಸಾಲಿನ ಹಿಂಗಾರು ಹಂಗಾಮಿನಡಿ ಕಾಲುವೆಗೆ ಪ್ರಾಯೋಗಿಕವಾಗಿ (On Trial Basis) ನೀರನ್ನು ಹರಿಸಿ ನೀರಾವರಿ ಸೌಕರ್ಯ ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ.
ಉ)	ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಳ್ಳುವ ಕ್ರಮಗಳೇನು (ವಿವರ ನೀಡುವುದು)?	
ಊ)	ಸದರಿ ಕಾಲುವೆ ಕಿ.ಮೀ. 147.00 ರಿಂದ 203.00ವರೆಗೆ ಕಾಲುವೆ ಕಾಮಗಾರಿ ಚಾಲ್ತಿಯಲ್ಲಿದ್ದು, ಸದರಿ ಕಾಲುವೆಗೆ ಮುಂದಿನ ದಿನಗಳಲ್ಲಿ ನೀರು ಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಇಂಡಿ ಏತ ನೀರಾವರಿ ಮುಖ್ಯ ಕಾಲುವೆಯ ಉದ್ದ 147.00 ಕಿ.ಮೀ. ಇದ್ದು, ಸದರಿ ಕಾಲುವೆಯ 147.00 ಕಿ.ಮೀ. ನಂತರ ವಿತರಣಾ ಕಾಲುವೆ ಸಂಖ್ಯೆ:59 ಆಗಿ ಮುಂದುವರಿಯುತ್ತದೆ. ಪ್ರಸ್ತುತ ವಿತರಣಾ ಕಾಲುವೆ 59ರ (ಕಿ.ಮೀ 0.00 ರಿಂದ ಕಿ.ಮೀ. 32.527 ರವರೆಗೆ) ನಿರ್ಮಾಣ ಕಾಮಗಾರಿ ವಿವಿಧ ಹಂತದ ಪ್ರಗತಿಯಲ್ಲಿದೆ. ಸದರಿ ಕಾಮಗಾರಿಗಳನ್ನು ಆಧ್ಯತೆ ಮೇರೆಗೆ ಪೂರ್ಣಗೊಳಿಸಿ ಕಾಲುವೆ ಜಾಲದ ಅಂಚಿನ ವರೆಗೂ ಪ್ರಾಯೋಗಿಕವಾಗಿ ನೀರು ಹರಿಸಲು ಕ್ರಮ ಜರುಗಿಸಲಾಗುತ್ತಿದೆ.
ಋ)	ಈ ಕಾಲುವೆಯ ದೇಸಾಯಿ ಗೇಟ್ 39ರ ಡಿಸ್ಟ್ರಿಬ್ಯೂಟರ್ ಬಳಿ ಅಕ್ರಮವಾಗಿ ಕಂಟ್ರೋಲ್ ಗೇಟ್ ವಾಲ್ವ್ ಅಳವಡಿಸಿಕೊಂಡು ಕಾಲುವೆಯಿಂದ ಬೇರೆ ಕಡೆ ನೀರು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೇಸಾಯಿ ಗೇಟ್ 39 ರ ಡಿಸ್ಟ್ರಿಬ್ಯೂಟರಿ ಬಳಿ ಅಕ್ರಮವಾಗಿ ಕಂಟ್ರೋಲ್ ಗೇಟ್ ವಾಲ್ವ್ ಅಳವಡಿಸಿಕೊಂಡು ಕಾಲುವೆಯಿಂದ ಬೇರೆ ಕಡೆ ನೀರು ಪಡೆಯುತ್ತಿರುವುದಿಲ್ಲ.
ಎ)	ಬಂದಿದ್ದಲ್ಲಿ ಸದರಿ ಅಕ್ರಮ ಕಂಟ್ರೋಲ ಗೇಟವಾಲ್ವ್ ತೆರವುಗೊಳಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ, ಈ ಬಗ್ಗೆ ಸರ್ಕಾರದ ನೀಲುವೇನು?	

ಸಂಖ್ಯೆ: ಜಸಂಇ 60 ಡಬ್ಲ್ಯೂಬಿಎಂ 2018

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 64 ಎನ್‌ಎಲ್‌ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ನಾರಾಯಣಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 999ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ನಾರಾಯಣಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 999ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

12/12/18

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 999
2. ಸದಸ್ಯರ ಹೆಸರು : ಶ್ರೀ ನಾರಾಯಣಗೌಡ
3. ಉತ್ತರಿಸಬೇಕಾದ ದಿನಾಂಕ : 13-12-2018
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೇಮಾವತಿ ನದಿಯಿಂದ ಕೆ.ಆರ್.ಪೇಟೆ ತಾಲ್ಲೂಕು ಗುಡ್ಡೆಹೊಸಹಳ್ಳಿ ಗ್ರಾಮದ ಬಳಿಯಿಂದ ಲಿಫ್ಟ್ ಮೂಲಕ ನೀರನ್ನು ಎತ್ತಿ ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; (ವಿವರ ಒದಗಿಸುವುದು)	ಹೇಮಾವತಿ ನದಿಯಿಂದ ಕೆ.ಆರ್.ಪೇಟೆ ತಾಲ್ಲೂಕು ಗುಡ್ಡೆಹೊಸಹಳ್ಳಿ ಗ್ರಾಮದ ಹತ್ತಿರ ನೀರನ್ನು ಎತ್ತಿ ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ಒಟ್ಟಾರೆ 69 ಕೆರೆಗಳನ್ನು ಹಾಗೂ 23 ಕಟ್ಟೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ರೂ.212.00 ಕೋಟಿಗಳ ಮೊತ್ತದ ಯೋಜನಾ ವರದಿಯು ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ.
ಆ	ಹಾಗಿದ್ದಲ್ಲಿ, ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು; ಈ ಯೋಜನೆಯನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು (ವಿವರ ನೀಡುವುದು);	
ಇ	ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಮಿತಿ ನಿಗದಿಪಡಿಸಲಾಗಿದೆಯೇ (ವಿವರವನ್ನು ಒದಗಿಸುವುದು)?	

ಸಂಖ್ಯೆ:ಜಸಂಇ 64 ಎನ್ಎಲ್ಎ 2018

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

<u>ಕರ್ನಾಟಕ ಸರ್ಕಾರ</u>

ಸಂ:ಕೃಇ 134 ಕೃಮಸ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ
ಬೆಳಗಾವಿ, ದಿನಾಂಕ: 12.12.2018

102
U/S
13/12/18

ಇವರಿಂದ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಸುವರ್ಣಸೌಧ, ಬೆಳಗಾವಿ

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ಸುವರ್ಣಸೌಧ,
ಬೆಳಗಾವಿ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ **ಶ್ರೀ. ಜಯರಾಮ್ ಎ.ಎಸ್.** ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1447 ಗೆ ಉತ್ತರ ಒದಗಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ **ಶ್ರೀ. ಜಯರಾಮ್ ಎ.ಎಸ್.** ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1447 ಗೆ ಉತ್ತರದ 250 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1447
ಸದಸ್ಯರ ಹೆಸರು	ಶ್ರೀ ಜಯರಾಮ್ ಎ.ಎಸ್
ಉತ್ತರಿಸಬೇಕಾದ ದಿನಾಂಕ	14-12-2018
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಕಂಡುಬಂದ ಹೊಸ ದಿಗ್ಬಂದನ ಕಳೆ-ಕಾಡುದವನ (ಅಂಬ್ರೋಸಿಯಾ ಪ್ಸಿಲೋಸ್ಟೇಕಿಯ) ಸೂರ್ಯಕಾಂತಿ ಜಾತಿಯ ಬಹುವಾರ್ಷಿಕ ಬೆಳೆಯಾದ ವಿದೇಶಿ ಕಳೆಯು ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಮುನಿಯೂರು ಮಾದಿಹಳ್ಳಿ ಹಾಗೂ ತಾಳಕೆರೆ ಗ್ರಾಮ ಪಂಚಾಯಿತಿಗಳ ಸರಹದ್ದಿನ ಹಳ್ಳಿಗಳ ಸುಮಾರು 190 ರೈತರ ಜಮೀನುಗಳಿಗೆ ಹರಡಿರುವುದರಿಂದ ಬೆಳೆ ಬೆಳೆಯಲು ಸಾಧ್ಯವಾಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಸ ದಿಗ್ಬಂದನ ಕಳೆ-ಕಾಡುದವನ ಕಳೆಯು (*Ambrosia psilostachya*) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಮುನಿಯೂರು ಮಾದಿಹಳ್ಳಿ ಹಾಗೂ ತಾಳಕೆರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಹಳ್ಳಿಗಳಲ್ಲಿ ಕಂಡುಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ	ಹಾಗಿದ್ದಲ್ಲಿ, ಸದರಿ ಕಾಡು-ದವನ ಕಳೆಯನ್ನು ಸಂಪೂರ್ಣ ನಾಶ ಮಾಡುವ ನಿಟ್ಟಿನಲ್ಲಿ ಸೂಕ್ತವಾದ ಬೆಳೆಗಳನ್ನು ಬೆಳೆಯಲು ತುರ್ತಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಪರಿಹಾರವೇನು ?	ಕಾಡುದವನ ಕಳೆಯು ಗೆಡ್ಡೆಗಳ (Rhizomes) ಮೂಲಕ ಪ್ರಸರಣವಾಗುವುದರಿಂದ ಭೂಮಿಯಿಂದ ಹೊರಬಂದ ಚಿಗುರುಗಳನ್ನು ಕಳೆನಾಶಕಗಳ ಮೂಲಕ ನಿಯಂತ್ರಿಸಿದರೂ, ತದನಂತರ ಭೂಮಿಯಲ್ಲಿ ತೇವಾಂಶವಿದ್ದಾಗ ಗಿಡದ ತುಂಡುಗಳ ಮೂಲಕ ಚಿಗುರುವುದರಿಂದ ಇದರ ಸಂಪೂರ್ಣ ನಿರ್ಮಲನೆ ಕಷ್ಟಸಾಧ್ಯವಾಗಿರುತ್ತದೆ. ಕಾಡು-ದವನ ಕಳೆಯ ನಿರ್ಮೂಲನೆ ಮಾಡುವ ಉದ್ದೇಶದಿಂದ 2013-14ನೇ ಸಾಲಿನಲ್ಲಿ ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರಿಗೆ ರೂ. 12.10 ಲಕ್ಷ ಅನುದಾನವನ್ನು ಒದಗಿಸಿ ವಿಜ್ಞಾನಿಗಳ ನೇತೃತ್ವದಲ್ಲಿ 2017 ರವರೆಗೆ ಅಗತ್ಯ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಬಾಧಿತ ಹೊರವರ್ತಲ ಪ್ರದೇಶದಿಂದ ಕಳೆಗಳ ನಿಯಂತ್ರಣ ಕಾರ್ಯ ಕೈಗೊಂಡಿದ್ದರಿಂದ ಕಳೆಯು ಬಾಧಿತ ಪ್ರದೇಶದಿಂದ ಇತರೆಡೆಗೆ ಪ್ರಸರಣಗೊಳ್ಳುವುದನ್ನು ತಡೆಯಲಾಗಿರುತ್ತದೆ. ಮುಂಗಾರಿನ ರಾಗಿ ಬೆಳೆಯುವ ಪ್ರದೇಶಗಳಲ್ಲಿ 2-4, ಡಿ ಸೋಡಿಯಂ ಸಾಲ್ಟ್ ಕಳೆನಾಶಕವನ್ನು ಹಾಗೂ ಬೆಳೆಯಿಲ್ಲದ ಖಾಲಿ ಜಾಗದಲ್ಲಿ, ಅರಣ್ಯ ಪ್ರದೇಶ ಹಾಗೂ ಬಂಜರು (ಕೃಷಿ ಯೋಗ್ಯವಲ್ಲದ) ಪ್ರದೇಶದಲ್ಲಿ ಗ್ಲೈಫೋಸೇಟ್ ಕಳೆನಾಶಕವನ್ನು ಬಳಸಿ ನಿಯಂತ್ರಣ ಕಾರ್ಯ ಕೈಗೊಳ್ಳಲಾಗಿರುತ್ತದೆ. ಬಾಧಿತ ಪ್ರದೇಶದ ರೈತರಿಗೆ ಉಚಿತವಾಗಿ ಕಳೆನಾಶಕಗಳನ್ನು ಹಾಗೂ ಸಿಂಪರಣಾ ವೆಚ್ಚವನ್ನು ಕಳೆ ನಿಯಂತ್ರಣ ಯೋಜನೆಯ ಮೂಲಕ

		ಒದಗಿಸಲಾಗಿರುತ್ತದೆ. ಕಳೆಯ ಮೇಲೆ ಮೆಕ್ಸಿಕನ್ ದುಂಬಿಯನ್ನು ಬಿಡುಗಡೆಗೊಳಿಸಿ ಜೈವಿಕ ನಿಯಂತ್ರಣ ಮಾಡುವ ಬಗ್ಗೆ ಸಂಶೋಧನೆಯ ಮೂಲಕ ಪ್ರಯತ್ನ ಮಾಡಲಾಗಿದ್ದು, ಸ್ವಲ್ಪ ಮಟ್ಟಿಗೆ ನಿಯಂತ್ರಣ ಕಂಡುಬಂದಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಕಳೆಯ ಪರಿಣಾಮಕಾರಿ ನಿರ್ಮೂಲನೆಗೆ ಸಂಶೋಧನೆ ಮತ್ತು ನಿರ್ಮೂಲನೆಯನ್ನು ಕೈಗೊಳ್ಳಲು ರೂ. 7.69 ಲಕ್ಷಗಳ ಅನುದಾನವನ್ನು ರಾಜ್ಯ ಸರ್ಕಾರದ ವತಿಯಿಂದ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಒದಗಿಸಲಾಗಿರುತ್ತದೆ. ಮುಂದುವರೆದು, ಕೇಂದ್ರ ಸರ್ಕಾರದಿಂದಲೂ ಸಹಾ ಕಳೆಯ ನಿರ್ಮೂಲನೆಗೆ ಕೇಂದ್ರೀಯ ಸಮಗ್ರ ಪೀಡೆ ನಿರ್ವಹಣಾ ಕೇಂದ್ರ, ಬೆಂಗಳೂರು ಇವರಿಗೆ ಪ್ರಸಕ್ತ ಸಾಲಿನಿಂದ ಮೂರು ವರ್ಷಗಳಿಗೆ ರೂ.35.1348 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಕಳೆ ನಿರ್ವಹಣೆ ಬಗ್ಗೆ ಈಗಾಗಲೇ ಸ್ಥಳಿಯವಾಗಿ ರಚಿಸಿಕೊಂಡಿರುವ "ಕಾಡು ದವನ ನಿರ್ಮೂಲನಾ ಕ್ಷೇಮಾಭಿವೃದ್ಧಿ ಸಂಘ"ದ ಸದಸ್ಯರು ಹಾಗೂ ರೈತರಿಗೆ ತರಬೇತಿ ಮತ್ತು ಅರಿವು ಮೂಡಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆಯಿಂದ ಬಾಧೆಗೊಳಗಾದ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಲಾಗಿದೆ. ಗೋಡೆ ಬರಹಗಳನ್ನು ಮತ್ತು ಕರಪತ್ರಗಳನ್ನು ವಿತರಿಸಿ ಕಳೆ ನಿರ್ಮೂಲನೆಯ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು, ಕೇಂದ್ರೀಯ ಸಮಗ್ರ ಪೀಡೆ ನಿರ್ವಹಣಾ ಕೇಂದ್ರ, ಬೆಂಗಳೂರು ಮತ್ತು ಕೃಷಿ ಇಲಾಖೆಯ ಸಮನ್ವಯದೊಂದಿಗೆ ಕಾಡುದವನ ಕಳೆ ನಿರ್ಮೂಲನಾ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ., ಸಾಮೂಹಿಕವಾಗಿ ಭೌತಿಕ, ರಸಾಯನಿಕ ಹಾಗೂ ಜೈವಿಕ ವಿಧಾನಗಳನ್ನು ಅನುಸರಿಸಿ ಸಮಗ್ರ ಕಳೆ ನಿರ್ಮೂಲನಾ ಪದ್ಧತಿಗಳ ಮೂಲಕ ಮಾತ್ರ ಈ ಕಳೆಯ ನಿರ್ಮೂಲನೆ ಪರಿಹಾರವಾಗಿರುತ್ತದೆ.

ಸಂಖ್ಯೆ: ಕೃಇ 134 ಕೃಮಸ 2018

(ಎನ್.ಎಚ್.ಶಿವಶಂಕರ ರೆಡ್ಡಿ)

ಕೃಷಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 60 ಡಬ್ಲ್ಯೂಎಲ್‌ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ನಾರಾಯಣ ಸ್ವಾಮಿ. ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 291ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ನಾರಾಯಣ ಸ್ವಾಮಿ. ಎಲ್.ಎನ್. (ದೇವನಹಳ್ಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 291ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

12/12/18

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 291
2. ಸದಸ್ಯರ ಹೆಸರು : ಶ್ರೀ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ)
3. ಉತ್ತರಿಸಬೇಕಾದ ದಿನಾಂಕ : 13.12.2018
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಎತ್ತಿನಹೊಳೆ ಯೋಜನೆಯಿಂದ ದೇವನಹಳ್ಳಿ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯ ಬಿನ್ನಿಮಂಗಲ ಹರವೇಶನಹಳ್ಳಿ ಮುಂತಾದ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ ಕೈಗೊಂಡಿರುವ ಯೋಜನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಿಂದ ದೇವನಹಳ್ಳಿ ವಿಧಾನ ಸಭಾಕ್ಷೇತ್ರದ 11 ಕೆರೆಗಳಿಗೆ 0.336 ಟಿ.ಎಂ.ಸಿ ನೀರನ್ನು ಒದಗಿಸಲು ಯೋಜಿಸಲಾಗಿದೆ. ಬಿನ್ನಿಮಂಗಲ ಹರವೇಶನಹಳ್ಳಿ ಕೆರೆಗಳಿಗೆ ನೀರು ತುಂಬಿಸಲು ಎತ್ತಿನಹೊಳೆ ಯೋಜನೆಯಡಿ ಅವಕಾಶ ಕಲ್ಪಿಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಯೋಜನೆಯಿಂದ ಎಷ್ಟು ಕೆರೆಗಳಿಗೆ ನೀರು ತುಂಬಿಸಲು ಕ್ರಮಕೈಗೊಳ್ಳಲಾಗಿದೆ;	
ಇ)	ಈ ಯೋಜನೆಯಿಂದ ದೇವನಹಳ್ಳಿ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು?(ವಿವರ ಒದಗಿಸುವುದು)	ಪ್ರಸ್ತುತ ದೇವನಹಳ್ಳಿ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.ಆದರೆ ಯೋಜನೆಯ ಅನುಮೋದಿತ ಡಿಪಿಆರ್‌ನಲ್ಲಿ ದೇವನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಕುಡಿಯುವ ನೀರಿಗಾಗಿ 0.50 ಟಿಎಂಸಿ ನೀರನ್ನು ಒದಗಿಸಲು ಯೋಜಿಸಲಾಗಿದೆ.

ಸಂಖ್ಯೆ: ಜಸಂಇ 60 ಡಬ್ಲ್ಯೂಎಲ್ಎ 2018

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	291
2.	ಸದಸ್ಯರ ಹೆಸರು	:	ಶ್ರೀ ನಾರಾಯಣ ಸ್ವಾಮಿ ಎಲ್.ಎನ್. (ದೇವನಹಳ್ಳಿ)
3.	ಉತ್ತರಿಸಬೇಕಾದ ದಿನಾಂಕ	:	13.12.2018
4.	ಉತ್ತರಿಸುವ ಸಚಿವರು	:	ಜಲ ಸಂಪನ್ಮೂಲ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಎತ್ತಿನಹೊಳೆ ಯೋಜನೆಯಿಂದ ದೇವನಹಳ್ಳಿ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯ ಬಿನ್ನಿಮಂಗಲ ಹರವೇಶನಹಳ್ಳಿ ಮುಂತಾದ ಕೆರೆಗಳಿಗೆ ನೀರು ತುಂಬಿಸುವ ಬಗ್ಗೆ ಕೈಗೊಂಡಿರುವ ಯೋಜನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಿಂದ ದೇವನಹಳ್ಳಿ ವಿಧಾನ ಸಭಾಕ್ಷೇತ್ರದ 11 ಕೆರೆಗಳಿಗೆ 0.336 ಟಿ.ಎಂ.ಸಿ ನೀರನ್ನು ಒದಗಿಸಲು ಯೋಜಿಸಲಾಗಿದೆ. ಬಿನ್ನಿಮಂಗಲ ಹರವೇಶನಹಳ್ಳಿ ಕೆರೆಗಳಿಗೆ ನೀರು ತುಂಬಿಸಲು ಎತ್ತಿನಹೊಳೆ ಯೋಜನೆಯಡಿ ಅವಕಾಶ ಕಲ್ಪಿಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಯೋಜನೆಯಿಂದ ಎಷ್ಟು ಕೆರೆಗಳಿಗೆ ನೀರು ತುಂಬಿಸಲು ಕ್ರಮಕೈಗೊಳ್ಳಲಾಗಿದೆ;	
ಇ)	ಈ ಯೋಜನೆಯಿಂದ ದೇವನಹಳ್ಳಿ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು?(ವಿವರ ಒದಗಿಸುವುದು)	ಪ್ರಸ್ತುತ ದೇವನಹಳ್ಳಿ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.ಆದರೆ ಯೋಜನೆಯ ಅನುಮೋದಿತ ಡಿಪಿಆರ್‌ನಲ್ಲಿ ದೇವನಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಕುಡಿಯುವ ನೀರಿಗಾಗಿ 0.50 ಟಿಎಂಸಿ ನೀರನ್ನು ಒದಗಿಸಲು ಯೋಜಿಸಲಾಗಿದೆ.

ಸಂಖ್ಯೆ: ಜಸಂಇ 60 ಡಬ್ಲ್ಯೂಎಲ್ಎ 2018

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 49 ಎಂಎಲ್ಎ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12/12/2018

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ
ಸುವರ್ಣಸೌಧ, ಬೆಳಗಾವಿ.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1390ಕ್ಕೆ ಉತ್ತರ ನೀಡುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1390ಕ್ಕೆ ದಿನಾಂಕ:13.12.2018 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ದಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,
12/12/18
(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1390
ಸದಸ್ಯರ ಹೆಸರು : ಶ್ರೀ.ಎಂ.ಎಸ್.ಸೋಮಲಿಂಗಪ್ಪ (ಸಿರಗುಪ್ಪ)
ಉತ್ತರಿಸುವ ದಿನಾಂಕ : 13.12.2018
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬಳ್ಳಾರಿ ಜಿಲ್ಲಾ ಸಿರುಗುಪ್ಪ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಂಡಿಗನೂರು ಕೆರೆಯ ವ್ಯಾಪ್ತಿ ಎಷ್ಟು.	ಬಳ್ಳಾರಿ ಜಿಲ್ಲೆ ಸಿರುಗುಪ್ಪ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಂಡಿಗನೂರು ಕೆರೆಯ ಒಟ್ಟು ವಿಸ್ತೀರ್ಣ: 335 ಎಕರೆಗಳು.
ಆ	ಈ ಕೆರೆಯ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿ ಖಾಸಗಿ ವ್ಯಕ್ತಿಗಳು ಮೀನಿನ ಕೆರೆಗಳನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.	ಗುಂಡಿಗನೂರು ಕೆರೆಯಲ್ಲಿ ಯಾವುದೇ ಮೀನು ಸಾಕಾಣಿಕೆ ಮಾಡುತ್ತಿಲ್ಲ.
ಇ	ಹಾಗಿದ್ದಲ್ಲಿ, ಎಷ್ಟು ಎಕರೆ ಕೆರೆಯ ಒತ್ತುವರಿ ಆಗಿದೆ.	ಪ್ರಸ್ತುತ ಸದರಿ ಕೆರೆಯ ಅಭಿವೃದ್ಧಿ ಸಣ್ಣ ನೀರಾವರಿ ವಿಭಾಗ, ಬಳ್ಳಾರಿ, ಇವರ ವತಿಯಿಂದ ಕೈಗೊಳ್ಳಲಾಗುತ್ತಿದೆ. ಮುಂದುವರೆದು ಸದರಿ ಕೆರೆಯ ಸರ್ವೆ ಕಾರ್ಯಕೈಗೊಂಡು ಸದರಿ ಕೆರೆಯ ಗಡಿಗಳನ್ನು ಗುರುತಿಸಿ, ಒತ್ತುವರಿ ಕಂಡು ಬಂದಲ್ಲಿ, ಒತ್ತುವರಿಯನ್ನು ಜಿಲ್ಲಾಡಳಿತದ ಸಹಯೋಗದಿಂದ ತೆರವುಗೊಳಿಸಲಾಗುವುದು ಹಾಗೂ ಕೆರೆಯ ಹದ್ದುಬಸ್ತು ಕೈಗೊಳ್ಳಲಾಗುವುದು.
ಈ	ಹಾಗಿದ್ದಲ್ಲಿ, ಈ ಅಕ್ರಮ ಒತ್ತುವರಿಗಳನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು.	

ಜಸಂಇ 49 ಎಂ.ಎಲ್.ಎ 2018

(ಡಿ.ಕೆ.ಶಿವಕುಮಾರ್)
ಜಲಸಂಪನ್ಮೂಲ ಸಚಿವರು